375

ಮೈಸೂರ್ ಶೀಮೆ ಕಂಪ್ಟ್ರೋಲರ್ ಸಾಹೆಬರವರಿಂದ.

ಖಜಾನೆ ಇಲಾಖಾ ಯಲ್ಲಾ ಡೆಪ್ಯುಟಿ ಕಮ್ಮಿಷನರವರುಗಳಿಗೆ.

ತಾರೀಖು 10ನೇ ಏಪ್ರಿಲ್ 1896ನೇ ಇಸವಿ.

ಸರ್ಕ್ಯೂಲರ್ ನಂ. 447—54—ಆರ್. ಇ.—7.

ಪದೇ ಪದೇ ಈ ಆಫಿಸಿನಿಂದ ತಿಳಿಯಪಡಿಸಿದಾಗ್ಯೂ ಆಬ್ಕಾರಿ ಚಲ್ಲ್ಗಳನ್ನ ಇನ್ನೂ ಅತ್ಯಪ್ತಿಕರವಾಗಿ ತಯಾರ್ಮಾಡಿ ರವಾನಿಸುವದು ನೋಡಿ ಕಂಟ್ರೋಲರ್‌ಯವರು ವಿಷಾದಗೊಂಡು ಈ ಕೆಳಗೆ ಕಂಡ ವಿಧಾಯಕವನ್ನು ತಿಳಿಯಪಡಿಸುವದಲ್ಲದೆ ಮುಂದೆ ಸದರೀ ಮೇರೆ ನಡದುಕೊಳ್ಳುವ ಭಾಗದಲ್ಲಿ ಖಜಾನೆ ಇಲಾಖಾ ಡೆಪ್ಯೂಟಿ ಕಮ್ಮಿಷನರ್‌ಯವರು ತಾಲ್ಲೂಕು ಆಮಿಲರಿಗೆ ಖಂಡಿತವಾದ ಹುಕುಂ ಕೊಡಬೇಕೆಂದು ಕೋರಿಕೊಳ್ಳುತ್ತಾರೆ.

(1) ಚಲ್ಲ್ಗಳಲ್ಲಿ ಕಾಣಿಸಲ್ಪಡುವ ಫಿರ್ಮಾ ಹೆಸರು ನಂಬರು ಮತ್ತು ಇಜಾರದಾರನ ಹೆಸರು ಸಹ ಎಕ್ಸೈಜ್ ಕಮ್ಮಿಷನರ್‌ಯವರಿಂದ ಈ ಆಫಿಸಿಗೆ ತಲಪಿರುವ ಹರಾಜು ಪಟ್ಟಿಯಲ್ಲಿ ಕಂಡಂತೆ ಬಂದಕ್ಕೊಂದು ತಾಳೆ ಇರುವಂತೆ ಅದೇ ನಂಬರು ಮತ್ತು ಹೆಸರು ಕಾಣಿಸಲ್ಪಡಬೇಕು.

(2) ಪ್ರತಿ ಬಂದು ಫಿರ್ಮಾಗಾಗಿ ಬಂದೊಂದು ಚಲ್ಲ್ ವ್ಯವಯೋನಬೇಕೇಹೊರ್ತು ಅನೇಕ ಫಿರ್ಮಾಗಳ ಇಜಾರದಾರ ಒಬ್ಬನೇಯಾಗಿರುತ್ತಾನೆಂಬ ಅಭಿಪ್ರಾಯದ ಮೇಲೆ ಅವನಿಗೆ ವಳಪಟ್ಟ ಒಟ್ಟು ಫಿರ್ಮಾಗಳಿಗಾಗಿ ಬಂದೇ ಚಲ್ಲ್ ತಯಾರ್ಮಾಡಿ ರವಾನಿಸತಕ್ಕದ್ದಲ್ಲಾ.

(3) ಯಾವ ಸಾಲ್ ಮತ್ತು ಮಾಹೆಗಾಗಿ ಗುತ್ತಿಗೆ ಮೊಬಲಗು ವಸೂಲ್ಮಾಡಲ್ಪಟ್ಟಿರುತ್ತೋ ಅವುಗಳನ್ನ ಚಲನ್ನಲ್ಲಿ ಎಂದಿಗೂ ಕಾಣಿಸದೆ ಇರಕೂಡದು.

(4) ಖಜಾನೆಗೆ ಹಣ ಪಾವತಿಯಾದ ತಾರೀಖು ಕಾಣಿಸಲ್ಪಡಲು ಚಲ್ಲ್ ಕೆಳಭಾಗದಲ್ಲಿ ಬಿಟ್ಟಿರುವ ಜಾಗಾದಲ್ಲಿ ಟ್ರೆಜರಿ ಆಫೀಸರವರೇ ತಾರೀಖನ್ನ ಕಾಣಿಸಬೇಕೇಹೊರ್ತು ಇಜಾರದಾರರು ಅದನ್ನ ಬರಿಯಕೂಡದು.

(5) ಚಲ್ಲ್ಗಳಲ್ಲಿ ಮೊಬಲಗು ವಗೈರೆ ಯಾವದನ್ನಾದರೂ ತಿದ್ದಿದಲ್ಲಿ ಅದಕ್ಕೆ ಟ್ರೆಜರಿ ಆಫಿಸರವರ ರುಜು ಅಗತ್ಯವಾಗಿ ಆಗಿರಬೇಕು.

(6) ಚಲ್ಲ್‌ನಲ್ಲಿ ಕಾಣಿಸಲ್ಪಡುವ ಮೊಬಲಗು ಅಕ್ಷರ ಮತ್ತು ಸಂಖ್ಯೆಯಲ್ಲಿ ಸಹ ಬಂದಕ್ಕೊಂದು ಭೇದವಿಲ್ಲದಂತೆ ಸರಿಯಾಗಿ ಇರುತ್ತೆಂಬುವದನ್ನ ಜಾಗರೂಕತೆಯಿಂದ ನೋಡಿಕೊಳ್ಳಬೇಕು.

2. ಈ ಮೇಲ್ಕಂಡ ವಿಧಾಯಕದಂತೆಯಾಗಲಿ ಮತ್ತು ಇದಕ್ಕೆ ಹಿಂದೆ ಇದೇ ವಿಚಾರವಲ್ಲಿ ಕೊಡಲ್ಪಟ್ಟ ಸರ್ಕ್ಯೂಲರ್‌ನಂತೆ ಯಾಗಲಿ ತಯಾರ್ಮಾಡಲ್ಪಡದೇ ಇರುವ ವಿಶಿಷ್ಟ ಚಲ್ಲ್ಗಳೂ ವಾಪಸ್ ಮಾಡಲ್ಪಡುತ್ತದೆ.

ಈ. ಆರ್. ಸುಬ್ಬಾಯರ್,
ಕಾಂಪ್ಟ್ರೋಲರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ತಾರೀಖು 2ನೇ ಮೇ 1896.

ಸಿಟಿ ಮ್ಯುನಿಸಿಪಾಲಿಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಪುಜಕೂರ್ ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೀನಾ ಸಾಯಂಕಾಲದ ವ್ಯಾಳೆ ಕಟುವಾಗುವ ಕುರಿ ಅಥವಾ ಮೇಕೆ ರಾಸು 1ಕ್ಕೆ ಯರಡು ಆಣೆಮೇರಿಗೆ, 1896ನೇ ಇಸವಿ ಜುಲೈ ಗುರ್ತೇ ಲಾಗಾಯತು ಸ್ ೧೮೯೭ನೇ ಇಸವಿ ಜೂನ್ ಆಖೈರ್ ವಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವರಿಗೆ 96ನೇ ಇಸವಿ ಮೇ 23ನೇ ತಾರೀಖು ಶನಿವಾರ ಮಧ್ಯಾನ್ನ 3 ಘಂಟೆಯೊಳಗಾಗ ಕೊಡಬಹುದು.

2. ದರಖಾಸ್ತುಗಳ ಮೇಲ್ಬಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರ್‌ಹೌಸ್ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ, ಅಥವಾ ಕರೆನ್ಸೀ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಉಳಿಸಿಕೊಳ್ಳಲ್ಪಡುವದು. ಮತ್ತು ಮಂಜೂರಾದ ದರಖಾಸ್ತುದಾರನು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರ್ದೊಳಗೆ ಇಜಾರೆ ಮುಚ್ಚಳಿಕೆಯನ್ನು ಒರೆದು ಕೊಡುವದಕ್ಕೆ ತಪ್ಪಿದರೆ ಆತನ ಠೇವಣಿ ಹಣವು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಸ್ಲಾಟರ್ ಹೌಸನ್ನ ಪಾಕ ಮಾಡಿಸಲು ನೇಮಿಸಲ್ಪಡುವ ಯಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜಿಗಾಗಿ ಮಾಹೆ ಮಾನಾ 25 ರೂಪಾಯ್ಗೆ ಮೇರಿಗೆ ಹರಯೇಕ್ ತಿಂಗಳ 5ನೇ ತಾರೀಖಿನ ವಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್ ಹೌಸ್‌ನಲ್ಲಿ ಬೀಳುವ ಕಚರಾ ಕಂಟ್ರಾಕ್ಟುದಾರಗೆ ಕೇರತಕ್ಕದ್ದಿಲ್ಲ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನ ವಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾ ತಿಂಗಳ ಮೊಬಲಗನ್ನೂ ಮತ್ತು ಯಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜನ್ನೂ ಮುಂದಾಗಿಯೇ ಹಾಜರ್ಮಾಡಿ ರಸೀದಿಪಡಿಯಬೇಕಾಗಿದೆ.

8. ಮಾರ್ಕೆಟ್ ಪೋಯಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಆ ದಿನ ಆ ಮಾರ್ಕೆಟ್‌ನಲ್ಲಿ ಯಾರಿಂದಲೂ ರುಸುಂ ವಸೂಲ್ ಮಾಡಕೂಡದು. ಇದಕ್ಕಾಗಿ ಬೋರ್ಡಿನವರು ರಿಯಾಷ್ಟ್ ಕೊಡತಕ್ಕದ್ದಿಲ್ಲ.

9. ಠೇವಣಿ ಮೊಬಲಗು ಕಡೇ ತಿಂಗಳಲ್ಲಿ ವಸೂಲ್ ಬೀಳತಕ್ಕದ್ದೇ ಹೊರ್ತು ಮುಂದಾಗಿ ಯಾವ ತಿಂಗಳಿಗೂ ವಸೂಲ್ ಬೀಳತಕ್ಕದ್ದಿಲ್ಲ.